ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

ಹೇಳಿಕೆ ಹಾಳೆ
(ಆರ್.ಪಿ. ಸಂಖ್ಯೆ 57)
ನಮೂನೆ ಸಂಖ್ಯೆ 4
(ಸಿವಿಲ್)

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.: 18/2023

.......................................................................

CW 03
PW 04

| | | |
|---|---|---|
| ಹೆಸರು | : | ನಾಗರಾಜ ನಾಯ್ಕರ |
| ತಂದೆಯ ಹೆಸರು | : | ಅಮರೆಪ್ಪ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ಬೇಕರಿ ಕೆಲಸ |
| ವಾಸಸ್ಥಳ | : | ಹುಬ್ಬಳ್ಳಿ |

ದಿನಾಂಕ 31-01-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನನಗೆ ಚಾಸಾ 1,2,4 ಪರಿಚಯ ಇದ್ದಾರೆ. ಚಾಸ 5 ರವರು ಮರಣ ಹೊಂದಿರುತ್ತಾರೆ. ಆರೋಪಿ ಪರಿಚಯ ಇರುತ್ತಾರೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ಘಟನಾ ಜಾಗದ ಪಂಚನಾಮೆ ಆಗಿದ್ದು, ಅದರಲ್ಲಿ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಘಟನಾ ಜಾಗದ ಪಂಚನಾಮೆಯನ್ನು ಈಗಾಗಲೇ **ನಿಪಿ 2 ಎಂದು ಗುರುತಿಸಲಾಗಿದ್ದು** , ಸಾಕ್ಷಿಯ ಸಹಿಯನ್ನು **ನಿಪಿ 2 ಸಿ ಎಂದು** ಗುರುತಿಸಲಾಯಿತು. ಸದರಿ ಸಹಿಯನ್ನು 2022 ರಲ್ಲಿ ದುರ್ಗಾನಗರದ ಚಾಸಾ 1 ರವರ ಮನೆಯಲ್ಲಿ ಚಾಸಾ 1, ಚಾಸಾ 4 ಮತ್ತು ಆರೋಪಿ ಗಲಾಟೆ ಮಾಡುತ್ತಿದ್ದರು. ಚಾಸಾ 1 ರವರ ಮಗ ಚಾಸಾ 1 ರವರ ಹೆಂಡತಿಯನ್ನು ಹೊಡೆದಿದ್ದನು. ಆದ್ದರಿಂದ ಪೋಲಿಸರು ಪಂಚನಾಮೆ ಮಾಡಲು ಬಂದಿದ್ದರು, ನನ್ನ ಸಹಿ ಪಡೆದಿರುತ್ತಾರೆ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಅದರಲ್ಲಿ ತಾವು ಚಾಸಾ 1, 2 ಮತ್ತು ಪೋಲಿಸರು ಇರುತ್ತೇವೆ ಎನ್ನುತ್ತಾರೆ. ಸದರಿ ಭಾವಚಿತ್ರವನ್ನು ಈಗಾಗಲೇ ನಿಪಿ 3 ಎಂದು ಗುರುತಿಸಲಾಗಿದೆ. ಚಾಸಾ 1 ರವರು ಒಂದು ಕಟ್ಟಿಗೆಯನ್ನು ತೋರಿಸಿ ಅದರಿಂದ ಆರೋಪಿ ಚಾಸಾ 4 ರವರಿಗೆ ಹೊಡೆದಿರುತ್ತಾನೆ ಎಂದು

ಪೋಲಿಸರಿಗೆ ಕಟ್ಟಿಗೆಯನ್ನು ತೋರಿಸಿದರು. ಸದರಿ ಕಟ್ಟಿಗೆಯನ್ನು ನೋಡಿದರೆ ಗುರುತಿಸುತ್ತಿರಾ ಎಂದು ಮು.ಮಾ 1 ನ್ನು ತೋರಿಸಲಾಗಿ ಸಾಕ್ಷಿ ಅದೇ ಬಡಿಗೆಯನ್ನು ಚಾಸಾ 1 ರವರು ಪೋಲಿಸರಿಗೆ ಆ ದಿನ ತೋರಿಸಿದರು ಎನ್ನುತ್ತಾರೆ. ಆ ವಿಷಯಕ್ಕೆ ಸಂಬಂಧಿಸಿದಂತೆ ನಿಪಿ 2 ಕ್ಕೆ ಆಗ ಸಹಿ ಮಾಡಿರುತ್ತಿರಿ ಎಂದರೆ ಸರಿ. ಸಾಕ್ಷಿ ಮುಂದುವರೆದು ನಿಪಿ 2 ರಲ್ಲಿ ಬರೆದ ವಿಷಯ ಗೊತ್ತಿಲ್ಲ ಎನ್ನುತ್ತಾರೆ.

ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದು ಪಂಚರಾಗುವಂತೆ ಕೋರಿದ ನೀಡಿದ ನೋಟಿಸ ಆಗಿದ್ದು, ಅದರಲ್ಲಿ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ನೋಟಿಸನ್ನು ಈಗಾಗಲೇ **ನಿಪಿ 4 ಎಂದು ಗುರುತಿಸಲಾಗಿದ್ದು,** ಸಾಕ್ಷಿಯ ಸಹಿಯನ್ನು **ನಿಪಿ 4 ಬಿ ಎಂದು** ಗುರುತಿಸಲಾಯಿತು. ಸದರಿ ಸಹಿ ಯನ್ನು ಯಾವಗ ಮಾಡಿರುತ್ತೇನೆ ನನಗೆ ನೆನಪಿಲ್ಲ ಎನ್ನುತ್ತಾರೆ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**ಪಾಟೀ ಸವಾಲು : ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ದಿಃ ದಿಃ 09-12-2022 ರಂದು ಪೋಲಿಸರನ್ನು ನಿಮ್ಮನ್ನು ಚಾಸಾ 2 ರವರನ್ನು ನಿಪಿ 4 ರಂತೆ ನೋಟಿಸ ಕೊಟ್ಟು ಪಂಚರಾಗುವಂತೆ ಕೋರಿ, ನಿಮ್ಮ ಸಹಿ ಪಡೆದರು ಎಂದರೆ ನನಗೆ ನೆನಪಿಲ್ಲ. ಆ ದಿನ ಪೋಲಿಸರು ನಿಮ್ಮ ಸಮಕ್ಷಮ ಪಂಚನಾಮೆ ಜರುಗಿಸಿ ನಿಮಗೆ ಓದಿ ಹೇಳಿದ್ದರೂ ಸಹ ಆರೋಪಿತನಿಗೆ ಸಹಾಯವಾಗಲು ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ. ಪೋಲಿಸರು ನಿಮ್ಮ ಸಮಕ್ಷಮ ಪಂಚನಾಮೆ ಮಾಡಿ ಮು ಮಾ 1 ನ್ನು ಜಪ್ತಪಡಿಸಿಕೊಂಡಿದ್ದಾರೆಂದು ಮುಖ್ಯ ವಿಚಾರಣೆಯಲ್ಲಿ ನುಡಿದಿರುತ್ತಿರಿ ಎಂದರೆ ಅದನ್ನು ಬರೆದು ಓದಿ ಹೇಳಿದ ನಂತರ ಸಹಿ ಮಾಡಿರುತ್ತಿರಿ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> ಆರೋಪಿತ್ರೀ ಎಂ ಎಚ್ ಎಮ್ ವಕೀಲರಿಂದ

ಬೇಕರಿಯಲ್ಲಿ ರಿಡಿಂಗ ಕೆಲಸ ಮಾಡುತ್ತೇನೆ. ಚಾಸಾ 1 ಮತ್ತು 4 ರವರು ನಮ್ಮ ಅಂಗಡಿಗೆ ಬಂದು ಹೋಗುತ್ತಿದ್ದರು ಹಾಗಾಗಿ ಪರಿಚಯ. ಚಾಸಾ 1 ರವರು ನಿಮ್ಮ ಮನೆಯ ಪಕ್ಕದವರು ಆಗಿದ್ದರಿಂದ ನಿಮಗೆ ಹಣಕಾಸಿನ ಸಹಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಬೆಳಿಗ್ಗೆ 7.30 ಗಂಟೆಯಿಂದ 1.30 ರವರೆಗೆ ಕೆಲಸಕ್ಕೆ ಹೋಗುತ್ತಿದ್ದೆ. ಚಾಸಾ 1 ರವರ ಮನೆಯಲ್ಲಿ ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ. ನಾವು ಪಕ್ಕದ ಪಾನ ಶಾಪನಲ್ಲಿ ನಿಂತಿದ್ದಿದ್ದಾಗ ಗಲಾಟೆಯಾಗುತ್ತಿತ್ತು. ಗಲಾಟೆಯಾಗುವಾಗ ನಾವು ಚಾಸಾ 1 ರವರ ಮನೆಯಲ್ಲಿ ಇರಲಿಲ್ಲ, ಪಾನ ಶಾಪ ಹತ್ತಿರ ನಿಂತಿದ್ದೆ ಗಲಾಟೆ ಕಾಣಿಸುತ್ತಿತ್ತು ಎನ್ನುತ್ತಾರೆ. ಚಾಸಾ 1 ರವರಿಗೆ ಸಹಾಯ ವಾಗಲೆಂದು ಪಂಚನಾಮೆಗೆ ಸಹಕಾರಿಯಾಗುವಂತೆ ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂರೆ ಸರಿಯಲ್ಲ. ಪೋಲಿಸರು ಭಾವಚಿತ್ರಕ್ಕೆ ನಿಲ್ಲುವಂತೆ ಹೇಳಿದರು ನೀವು ನಿಂತು ಭಾವಚಿತ್ರವನ್ನು ತಗೆಸಿಕೊಂಡಿರುತ್ತಿರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.